# ನಿವೇದನೆ

## ಮಕ್ಕಳಿಗೆ ಕೊನೆಯ ಪಾಲು!

ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಎಲ್ಲ ಸರ್ಕಾರಗಳೂ ದೊಡ್ಡ ದನಿಯಲ್ಲಿ ಬಡಾಯಿ ಕೊಚ್ಚಿಕೊಳ್ಳುತ್ತವೆ. ಆದರೆ, ಸಾರ್ವಜನಿಕ ನೀತಿ ರೂಪಿಸುವ ಸಂದರ್ಭದಲ್ಲಿ ಮಕ್ಕಳು ಅಲಕ್ಷ್ಯಕ್ಕೆ ಒಳಗಾಗುತ್ತಾರೆ. ಇದು ಇಂದು ನಿನ್ನೆಯ ವರ್ತಮಾನವೂ ಅಲ್ಲ, ಈ ನಿರ್ಲಕ್ಷ್ಯ ಕರ್ನಾಟಕಕ್ಕೆ ಸೀಮಿತವಾದುದೂ ಅಲ್ಲ. ಮುಂದುವರಿದ ದೇಶಗಳಿಗೆ ಮಾದರಿಯಾದ ಅಮೆರಿಕದಲ್ಲೂ ಎಳೆಯರ ಕಡೆಗಣನೆ ಇದ್ದೇ ಇದೆ.

ಸರ್ಕಾರದ ಅಭಿವೃದ್ಧಿ ಮೀಮಾಂಸೆಯ ಪರಿಕಲ್ಪನೆ ಮತ್ತು ಸಾಧನೆಯ ಬಡಾಯಿಗೆ ಮಕ್ಕಳು ಒಂದು ದಾಳವಾಗಿ ಬಳಕೆಯಾಗುತ್ತಿರುವುದು ಈಚೆಗೆ ಹೆಚ್ಚಾಗುತ್ತಿದೆ. ಶಾಲಾ ಮಕ್ಕಳಿಗೆ ಸೈಕಲ್ಲು, ಪಿಯುಸಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವಂಥ ಕಾರ್ಯಕ್ರಮಗಳು ಜಾರಿಗೆ ಬರುತ್ತವೆ. ಇನ್ನೊಂದೆಡೆ ಶಾಲೆಗಳಿಂದ ಲಕ್ಷಾಂತರ ಮಕ್ಕಳು ಹೊರಗುಳಿಯುವ ಮೂಲಕ 'ಕಡ್ಡಾಯ ಶಿಕ್ಷಣ ಹಕ್ಕು' ನಗೆಪಾಟಲಿಗೆ ಈಡಾಗುತ್ತದೆ. ಬೀದಿಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ವರದಿಗಳೂ ಪ್ರಕಟಗೊಳ್ಳುತ್ತಿವೆ. ಮಕ್ಕಳ ಕುರಿತ ನಮ್ಮ ಕಾಳಜಿಯನ್ನು ಅಣಕಿಸುವಂಥ ಮತ್ತೊಂದು ಅಧ್ಯಯನ ಕಳೆದ ವಾರ ಪ್ರಕಟಗೊಂಡಿದೆ. ಮಕ್ಕಳಿಗೆ ಸಂಬಂಧಿಸಿದಂತೆ ಸರ್ಕಾರಿ ಯೋಜನೆಗಳ ಬಗ್ಗೆ ಅಧ್ಯಯನ ನಡೆಸಿರುವ 'ಬಜೆಟ್ ಅಂಡ್ ಪಾಲಿಸಿ ಸ್ಟಡೀಸ್ ಸೆಂಟರ್', ರಾಜ್ಯದಲ್ಲಿ ಮಕ್ಕಳ ಹಿತಾಸಕ್ತಿಗೆ ತೊಡಗಿಸಿರುವ ಮೊತ್ತ ಅತ್ಯಂತ ಕನಿಷ್ಠ ಪ್ರಮಾಣದ್ದು ಎಂದಿದೆ.

2001–2013ರವರೆಗಿನ ಅವಧಿಯಲ್ಲಿ ಐದು ವರ್ಷದೊಳಗಿನ ಮಕ್ಕಳಿಗೆಂದು ಸರ್ಕಾರ ತೀರಾ ಕಡಿಮೆ ಹಣವನ್ನು ತೊಡಗಿಸಿದೆ ಎನ್ನುವುದು ಅಧ್ಯಯನ ಬೆಳಕು ಚೆಲ್ಲಿರುವ ಪ್ರಮುಖ ಅಂಶ. ಶಿಕ್ಷಣದ ಜೊತೆಗೆ ಪೌಷ್ಟಿಕತೆ ಹಾಗೂ ಆರೋಗ್ಯ ಕಾಳಜಿಯಂಥ ಕ್ಷೇತ್ರಗಳಲ್ಲಿ ಕೂಡ ಸರ್ಕಾರದ ಹೂಡಿಕೆ ಸಮರ್ಪಕವಾಗಿಲ್ಲ ಎನ್ನುವ ವಿಷಯ ಚಿಣ್ಣರ ಕಾಳಜಿಯ ಬಗ್ಗೆ ಸರ್ಕಾರಕ್ಕೆ ಇರುವ ಬದ್ಧತೆಯನ್ನೇ ಪ್ರಶ್ನಿಸುವಂತಿದೆ. ಎಳೆಯ ಕಂದಮ್ಮಗಳು ಮಾತ್ರವಲ್ಲದೆ, 15ರಿಂದ 19 ವರ್ಷದೊಳಗಿನ ತಾರುಣ್ಯದ ಮಕ್ಕಳ ಕುರಿತೂ ಸರ್ಕಾರ ಆಸ್ಥೆ ವಹಿಸಿರುವುದು ಅಷ್ಟಕ್ಕಷ್ಟೇ. ಬಾಲ್ಯದಿಂದ ತಾರುಣ್ಯಾವಸ್ಥೆಯ ಸಂಕ್ರಮಣದ ಈ ಅವಧಿಯಲ್ಲಿ ಮಕ್ಕಳ ಬಗ್ಗೆ ವಿಶೇಷ ಮುತುವರ್ಜಿ ವಹಿಸಬೇಕಾಗಿದೆ. ಅವರ ಶೈಕ್ಷಣಿಕ, ಶಾರೀರಿಕ ಅಗತ್ಯಗಳಿಗೆ ಸ್ಪಂದಿಸುವುದರ ಜೊತೆಗೆ ಮಾನಸಿಕವಾಗಿ ಕೂಡ ಮಕ್ಕಳನ್ನು ಸಶಕ್ತಗೊಳಿಸಬೇಕಾಗಿದೆ. ಇದಕ್ಕೆ ತಕ್ಕನಾದ ಪರಿಸರ, ಸವಲತ್ತುಗಳನ್ನು ರೂಪಿಸುವ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಗಮನಹರಿಸಿಲ್ಲ ಎನ್ನಲಾಗಿದೆ. ಕಡು ಬಡತನದ ಕುಟುಂಬಗಳಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ಆರೋಗ್ಯ, ಪೌಷ್ಟಿಕತೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಸೀಮಿತ ಅವಕಾಶಗಳನ್ನಷ್ಟೇ ಹೊಂದಿವೆ ಎಂದೂ ಅಧ್ಯಯನ ಹೇಳಿದೆ. ಸದ್ಯಕ್ಕೆ ಈ ಅಧ್ಯಯನದ ಬಿಡಿ ವಿವರಗಳಷ್ಟೇ ಪ್ರಕಟಗೊಂಡಿದ್ದು, ಸ್ಪಷ್ಟ ಅಂಕಿ ಅಂಶಗಳು ಪ್ರಕಟಗೊಳ್ಳುವುದಿನ್ನೂ ಬಾಕಿಯಿದೆ.

ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಎಲ್ಲ ಸರ್ಕಾರಗಳೂ ದೊಡ್ಡ ದನಿಯಲ್ಲಿ ಬಡಾಯಿ ಕೊಚ್ಚಿಕೊಳ್ಳುತ್ತವೆ. ಆದರೆ, ಸಾರ್ವಜನಿಕ ನೀತಿ ರೂಪಿಸುವ ಸಂದರ್ಭದಲ್ಲಿ ಮಕ್ಕಳು ಅಲಕ್ಷ್ಯಕ್ಕೆ ಒಳಗಾಗುತ್ತಾರೆ. ಇದು ಇಂದು ನಿನ್ನೆಯ ವರ್ತಮಾನವೂ ಅಲ್ಲ, ಈ ನಿರ್ಲಕ್ಷ್ಯ ಕರ್ನಾಟಕಕ್ಕೆ ಸೀಮಿತವಾದುದೂ ಅಲ್ಲ. ಮುಂದುವರಿದ ದೇಶಗಳಿಗೆ ಮಾದರಿಯಾದ ಅಮೆರಿಕದಲ್ಲೂ ಎಳೆಯರ ಕಡೆಗಣನೆ ಇದ್ದೇ ಇದೆ. ಅಲ್ಲಿ ಮಕ್ಕಳಿಗಿಂತಲೂ ಹಿರಿಯ ನಾಗರಿಕರ ಅಗತ್ಯಗಳಿಗೆಂದೇ ಸರ್ಕಾರ ಹೆಚ್ಚು ಹಣ ವಿನಿಯೋಗಿಸುತ್ತಿರುವ ಕುರಿತು ಚರ್ಚೆಗಳು ನಡೆಯುತ್ತಿವೆ. ಸಂಪನ್ಮೂಲಗಳ ಕೊರತೆಯಿಂದಾಗಿ ಮಕ್ಕಳಿಗೆ ಉತ್ತಮ ಶಾಲೆಗಳು ಹಾಗೂ ಸಾಮುದಾಯಿಕ ವೈದ್ಯಕೀಯ ಸವಲತ್ತುಗಳನ್ನು ಪರಿಣಾಮಕಾರಿಯಾಗಿ ಒದಗಿಸಲು ಸಾಧ್ಯವಾಗದಿರುವ ಕುರಿತು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಕಳವಳ ವ್ಯಕ್ತಪಡಿಸಿದ್ದಾರೆ. ಭಾರತದಲ್ಲಂತೂ ಈ ಪರಿಸ್ಥಿತಿ ಮತ್ತಷ್ಟು ದಾರುಣವಾದುದು. ದೇಶದ ಐದು ವರ್ಷದೊಳಗಿನ ಪ್ರತಿಶತ 42 ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ ಎಂದು ಸಮೀಕ್ಷೆಯೊಂದು ಹೇಳಿದೆ. ಇಷ್ಟು ಮಾತ್ರವಲ್ಲ, ಪ್ರತಿ ದಿನ ಸುಮಾರು ಮೂರು ಸಾವಿರ ಕೂಸುಗಳು ಆಹಾರದ ಸಮಸ್ಯೆಯ ಕಾರಣದಿಂದಲೇ ಸಾವಿಗೀಡಾಗುತ್ತಿವೆ ಎನ್ನುವ ವರದಿಯೂ ಇದೆ.

ಸೈಕಲ್ ಅಥವಾ ಲ್ಯಾಪ್‌ಟಾಪ್ ಕೊಡುವಷ್ಟಕ್ಕೆ ಮಾತ್ರ ತನ್ನ ಜವಾಬ್ದಾರಿ ಮುಗಿಯಿತು ಎಂದು ಅಧಿಕಾರದಲ್ಲಿ ಇರುವವರು ಭಾವಿಸಿದಂತಿದೆ. ಆದರೆ, ಇಂಥ ಕಾರ್ಯಕ್ರಮಗಳಿಂದ ಮಕ್ಕಳಿಗಿಂತಲೂ ಅಧಿಕಾರಶಾಹಿಯೇ ಹೆಚ್ಚು ಪ್ರಯೋಜನ ಪಡೆದ ಉದಾಹರಣೆಗಳು ನಮ್ಮ ನಡುವೆ ಸಾಕಷ್ಟಿವೆ. ಚಾಲ್ತಿಯಲ್ಲಿರುವ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಪ್ರಯತ್ನಗಳೂ ಪ್ರಾಮಾಣಿಕವಾಗಿಲ್ಲ. ಇಂಥ ಸಂದರ್ಭದಲ್ಲಿ 'ಇಂದಿನ ಮಕ್ಕಳೇ ನಾಳೆಯ ಪ್ರಜೆಗಳು' ಎನ್ನುವ ಪಠ್ಯದಲ್ಲಿನ ಘೋಷಣೆಗಳು ತಮಾಷೆಯಂತೆ ಕಾಣಿಸುತ್ತವೆ.

ಮಕ್ಕಳಿಗೆ ಕೊನೆಯ ಪಾಲು ಅಥವಾ ಮಕ್ಕಳದು ಕೊನೆಯ ಸಾಲು ಎನ್ನುವುದು ಆರೋಗ್ಯಕರ ಸಮಾಜದ ಲಕ್ಷಣವಲ್ಲ. ಸಾಮಾಜಿಕ ಕಾರ್ಯಕ್ರಮಗಳನ್ನು ರೂಪಿಸುವ ಸಂದರ್ಭದಲ್ಲಿ ಮಕ್ಕಳಿಗೆ ವಿಶೇಷ ಗಮನವನ್ನು ನೀಡಬೇಕಾದುದು ಇಂದಿನ ಜರೂರು. ಈ ನಿಟ್ಟಿನಲ್ಲಿ ಸರ್ಕಾರಗಳು ಪ್ರಜ್ಞಾಪೂರ್ವಕ ನಿರ್ಧಾರಗಳನ್ನು ಕೈಗೊಳ್ಳಬೇಕಾಗಿದೆ ಹಾಗೂ ಪ್ರಭುತ್ವ ಮಕ್ಕಳಸ್ನೇಹಿ ಆಗುವಂತೆ ಸಮಾಜ ಒತ್ತಡ ಹೇರಬೇಕಾಗಿದೆ.

■ ರಘುನಾಥ ಚ.ಹ.

